

**ಟಾಟಾ ಎಂಯುವಿಯನ್ನು ಕಂಪೆನಿಯದ್ದೇ ಘಟಕದಲ್ಲಿ ಕ್ರಾಶ್ ಟೆಸ್ಟ್ ನಡೆಸಿದ ಚಿತ್ರ.**

ಇಂಧನಕ್ಕೆ ಎಷ್ಟು ಕಿ.ಮೀ ಕ್ರಮಿಸುತ್ತವೆ ಎಂಬುದನ್ನು ಆಧರಿಸಿ ಇಂಧನ ಕ್ಷಮತೆಯ ರೇಟಿಂಗ್ ನೀಡಲೂ ಭಾರತ್ ಎನ್‌ಸಿಎಪಿಯಲ್ಲಿ ಅವಕಾಶವಿದೆ.

'2017ರ ಅಕ್ಟೋಬರ್ ನಂತರ ಮಾರುಕಟ್ಟೆಗೆ ಬರಲಿರುವ ಹೊಸ ಕಾರ್‌ಗಳಿಗೆ ಭಾರತ್ ಎನ್‌ಸಿಎಪಿ ಅನ್ವಯವಾಗುತ್ತದೆ. ಈಗ ಮಾರುಕಟ್ಟೆಯಲ್ಲಿರುವ ಕಾರ್‌ಗಳಿಗೆ 2019ರ ಅಕ್ಟೋಬರ್‌ನಿಂದ ಭಾರತ್ ಎನ್‌ಸಿಎಪಿ ಅನ್ವಯವಾಗುತ್ತದೆ. ಈಗಿನ ಕಾರ್‌ಗಳನ್ನು ಹೊಸ ನಿಯಮಗಳಿಗೆ ತಕ್ಕಂತೆ ಮಾರ್ಪಡಿಸಲು ಕಂಪೆನಿಗಳಿಗೆ ಸಾಕಷ್ಟು ಕಾಲಾವಕಾಶ ನೀಡಲಾಗಿದೆ. ಆದರೆ ಕಂಪೆನಿಗಳು ತಮ್ಮ ಕಾರ್‌ಗಳನ್ನು ಕಡ್ಡಾಯವಾಗಿ ಕ್ರಾಶ್ ಟೆಸ್ಟ್ ಮತ್ತು ಇಂಧನ ಕ್ಷಮತೆ ರೇಟಿಂಗ್ ಪರೀಕ್ಷೆಗೆ ಒಳಪಡಿಸಬೇಕಿಲ್ಲ. ಅದು ಕಂಪೆನಿಗಳ ಇಚ್ಛೆಗೆ ಬಿಟ್ಟದ್ದು' ಎಂದು ಈ ಮಧ್ಯೆ ಸರ್ಕಾರ ಸ್ಪಷ್ಟಪಡಿಸಿದೆ.

ವಕ್ತಾರ: ನಾವು ಸುರಕ್ಷತೆಗೆ ಆದ್ಯತೆ ನೀಡುತ್ತೇವೆ ಎಂಬುದನ್ನು ಮೊದಲೇ ಸ್ಪಷ್ಟಪಡಿಸಿದ್ದೇವೆ. ಹೀಗಾಗಿ ನಮ್ಮ ವಾಹನಗಳ ಸುರಕ್ಷತೆಯ ಮಟ್ಟವನ್ನು ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಕಂಪೆನಿ ಮತ್ತಷ್ಟು ಬಂಡವಾಳ ಹೂಡಲಿದೆ. ವಿಶ್ವದ ಅತ್ಯಾಧುನಿಕ ಕ್ರಾಶ್ ಟೆಸ್ಟ್ ಸವಲತ್ತು ನಮ್ಮ ಘಟಕದಲ್ಲಿದೆ. ಜತೆಗೆ ಭಾರತದ ಅತ್ಯಂತ ಪರಿಣತ ಸುರಕ್ಷತಾ ಎಂಜಿನಿಯರ್‌ಗಳು ನಮ್ಮ ತಂಡದಲ್ಲಿದ್ದಾರೆ.'

★ ಕಾರ್‌ಗಳಲ್ಲಿ ಲಭ್ಯವಿರುವ ಸುರಕ್ಷತಾ ಸವಲತ್ತುಗಳ ಬಳಕೆಯ ಮಹತ್ವದ ಬಗ್ಗೆ ಗ್ರಾಹಕರಿಗೆ ಅರಿವು ಇರುವ ಪ್ರಮಾಣ ತೀರಾ ಕಡಿಮೆ ಇದೆ. ಗ್ರಾಹಕರಲ್ಲಿ ಅರಿವು ಮೂಡಿಸುವ ಬಗ್ಗೆ ನಿಮ್ಮ ಕಂಪೆನಿ ಕೈಗೊಳ್ಳುವ ಕ್ರಮಗಳೇನು?

ವಕ್ತಾರ: ಈ ಸಂಬಂಧ ಸರ್ಕಾರ ರೂಪಿಸಿರುವ ನಿಯಮಗಳನ್ನು ನಾವು ಪಾಲಿಸುತ್ತೇವೆ. ಗ್ರಾಹಕರಲ್ಲಿ ಈ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಈಗಾಗಲೆ ಹಲವು ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಜತೆ ಟಾಟಾ ಮೋಟಾರ್ಸ್ ದುಡಿಯುತ್ತಿದೆ. ಅದನ್ನು ಮುಂದುವರೆಸುತ್ತೇವೆ, ಜತೆಗೆ ಈ ಸಲುವಾಗಿ ಮತ್ತಷ್ಟು ಒತ್ತು ನೀಡುತ್ತೇವೆ.

## ಜಾರಿಗೂ ಮುನ್ನವೇ ಆಕ್ಷೇಪ

ಭಾರತ್ ಎನ್‌ಸಿಎಪಿ ಜಾರಿಯಾಗುವ ಮುನ್ನವೇ ಹಲವು ತಜ್ಞರು ಆ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ಭಾರತ್ ಎನ್‌ಸಿಎಪಿ ಯಾವುದೇ ಕಾರ್‌ಗಳಿಗೆ ಕಡ್ಡಾಯವಾಗಿ ಅನ್ವಯವಾಗುವುದಿಲ್ಲ. ಕಂಪೆನಿಗಳು ತಮ್ಮ ಕಾರ್‌ಗಳನ್ನು ಕ್ರಾಶ್ ಟೆಸ್ಟ್‌ಗಳಿಗೆ ಒಳಪಡಿಸುವುದು ಅವುಗಳ ಇಚ್ಛೆಗೆ ಬಿಟ್ಟದ್ದು. ಯಾವುದೇ ಕಾರ್ ಅನ್ನು ಕಡ್ಡಾಯವಾಗಿ ಕ್ರಾಶ್ ಟೆಸ್ಟ್‌ಗೆ ಒಳಪಡಿಸದಿದ್ದಲ್ಲಿ, ಭಾರತ್ ಎನ್‌ಸಿಎಪಿಯ ಉದ್ದೇಶವೇ ಈಡೇರುವುದಿಲ್ಲ' ಎನ್ನುತ್ತಾರೆ ಬೆಂಗಳೂರಿನ ರೇಸ್ ಡೈನಮಿಕ್ಸ್‌ನ ಚೇತನ್. ರೇಸ್ ಡೈನಮಿಕ್ಸ್ ಕಾರ್ ಮತ್ತು ಬೈಕ್‌ಗಳ ಇಂಧನ ಕ್ಷಮತೆ ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಉಪಕರಣಗಳ ಅಭಿವೃದ್ಧಿ ಮತ್ತು ತಯಾರಿಕೆಯಲ್ಲಿ ಹೆಸರು ಮಾಡಿದೆ. ಇದು ಈ ಕ್ಷೇತ್ರದಲ್ಲಿ ಸಂಶೋಧನೆ ನಡೆಸುತ್ತಿರುವ ಭಾರತದ ಏಕಮಾತ್ರ ಕಂಪೆನಿ. ಜತೆಗೆ ಸೇನಾ ವಾಹನಗಳ ಕೆಲವು ಸುರಕ್ಷತಾ ಸಾಧನಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಕೆಲವು ಸರ್ಕಾರಿ ಸಂಸ್ಥೆಗಳ ಜತೆ ರೇಸ್ ಡೈನಮಿಕ್ಸ್ ದುಡಿಯುತ್ತಿದೆ.

'ಭಾರತ್ ಎನ್‌ಸಿಎಪಿಯಲ್ಲಿ, ಕ್ರಾಶ್ ಟೆಸ್ಟ್ ಫಲಿತಾಂಶವನ್ನು ಬಹಿರಂಗ ಪಡಿಸಲಾಗುತ್ತದೆಯೇ ಇಲ್ಲವೇ ಎಂಬುದು ಸ್ಪಷ್ಟವಾಗಿಲ್ಲ. ಅಲ್ಲದೆ, ಕಂಪೆನಿಗಳು ಕ್ರಾಶ್ ಟೆಸ್ಟ್ ವಿವರಗಳನ್ನು ಗ್ರಾಹಕರಿಗೆ ನೀಡಬೇಕೇ ಬೇಡವೇ ಎಂಬುದೂ ಸ್ಪಷ್ಟವಿಲ್ಲ. ರೇಟಿಂಗ್ ಅನ್ನು ಬಹಿರಂಗಪಡಿಸಿದಲ್ಲಿ, ಹೆಚ್ಚು ಸುರಕ್ಷಿತವಾದ ಕಾರ್ ಕೊಳ್ಳುವ ಆಯ್ಕೆ ಗ್ರಾಹಕನಿಗೆ ಲಭ್ಯವಾಗಲಿದೆ' ಎಂದು ಚೇತನ್ ವಿಶ್ಲೇಷಿಸುತ್ತಾರೆ.

'ಅಲ್ಲದೆ ಕ್ರಾಶ್ ಟೆಸ್ಟ್‌ಗೆ ಕಾರ್‌ಗಳನ್ನು ಹೇಗೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ ಎಂಬುದನ್ನೂ ವಿವರಿಸಿಲ್ಲ. ಒಂದೊಮ್ಮೆ ಕಂಪೆನಿಗಳೇ ಕಾರ್‌ಗಳನ್ನು ಆಯ್ಕೆ ಮಾಡಿ ನೀಡಿದಲ್ಲಿ, ಆ ಕಾರ್‌ಗಳನ್ನು ಮಾರ್ಪಡಿಸಿರುವ ಸಾಧ್ಯತೆ ಇರುತ್ತದೆ. ಹೀಗಾಗಿ ಡೀಲರ್ ಅಥವಾ ಮಳಿಗೆಗಳಿಂದಲೇ ಕಾರ್‌ಗಳನ್ನು ಆಯ್ಕೆ ಮಾಡಿಕೊಂಡು ಕ್ರಾಶ್ ಟೆಸ್ಟ್‌ಗೆ ಒಳಪಡಿಸುವಂತೆ ನಿಯಮ ರೂಪಿಸುವುದು ಹೆಚ್ಚು ಸೂಕ್ತ. ಎಲ್ಲಕ್ಕಿಂತ ಮುಖ್ಯವಾಗಿ ಭಾರತ್ ಎನ್‌ಸಿಎಪಿಯನ್ನು ಕಡ್ಡಾಯ ಮಾಡಿದರೆ ಮಾತ್ರ ಅದರಿಂದ ಉಪಯೋಗವಾಗುತ್ತದೆ' ಎಂದು ಅವರು ಹೇಳುತ್ತಾರೆ.